ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ09-12-2025 ರಂದು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಆರ್ ಎಸ್ ಎಚ್ ವಕೀಲರಿಂದಃ

29. ನನ್ನ ದಾವೆ ಜೊತೆ ಸಲ್ಲಿಸಿರುವ ನಮ್ಮ ಕುಟುಬಂದ ವಂಶವೃಕ್ಷ 1821 ರಿಂದ ನಮೂದಾಗಿರುತ್ತದೆ ಎಂದರೆ ಸರಿ. ಸದರಿ ವಂಶವೃಕ್ಷದ ಪ್ರಕಾರ ಈ ದಾವೆ ಸಲ್ಲಿಸುವಾಗ ವಾದಿಗೆ ಸುಮಾರು 86 ವರ್ಷ ವಯಸ್ಸಾಗಿತ್ತು. ಸದರಿ ವಂಶವೃಕ್ಷದ ಪ್ರಕಾರ ನಮ್ಮ ಕುಟುಂಬದ ಮೂಲ ಪುರುಷ ವಿಠ್ಠಲ್ ಪೈ ರವರಿಗೂ ಮತ್ತು ಈ ದಾವೆಯ ವಾದಿ ವಿಠ್ಠಲ್ ಪೈ ರವರಿಗೂ ಸುಮಾರು 3 ತಲೆಮಾರಿನ ಅಂತರ ಇರುತ್ತದೆ ಎಂದರೆ ಸರಿ.

30. ಸದರಿ ವಂಶವೃಕ್ಷದ ಪ್ರಕಾರ ನಮ್ಮ ಕುಟುಂಬದ ಮೂಲ ಪುರುಷ ವಿಠ್ಠಲ್ ಪೈ ರವರಿಗೂ ಮತ್ತು ಈ ದಾವೆಯ 2 ನೇ ಪ್ರತಿವಾದಿ ನಾಗೇಶ ವಾಮನ್ ಪೈ ರವರಿಗೂ ಸುಮಾರು 3-4 ತಲೆಮಾರಿನ ಅಂತರ ಇರುತ್ತದೆ ಎಂದರೆ ಸರಿ. ಸದರಿ ವಂಶವೃಕ್ಷಕ್ಕೆ ಸಂಬಂದಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ವಂಶವೃಕ್ಷದಲ್ಲಿ ತೋರಿಸಿರುವ ಎಲ್ಲರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ.

31. ವಾದಿಯಾದ ನನ್ನ ತಂದೆಯ ಅತ್ತೆಯಾದ ಭಿಮರತಿ ಮತ್ತು ಸಾವಿತ್ರಿ ಮತ್ತು ಜಾಯುಬಾಯಿ ರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಸದರಿ ಭಿಮರತಿ ರವರ ವಾರಸುದಾರರು ಈಗಲೂ ಇರುತ್ತಾರೆ.

32. ನಮ್ಮ ಮೂಲ ಕುಟುಂಬದಲ್ಲಿ 1941 ರಲ್ಲಿ ವಿಭಾಗ ಆಗಿದ್ದು ಸದರಿ ವಿಭಾಗದ ಮೂಲ ವಿಭಾಗ ಪತ್ರ ನನ್ನ ಬಳಿ ಇರುವುದಿಲ್ಲ. ನಮ್ಮ ಮೂಲ ಕುಟುಂಬದಲ್ಲಿ 1941 ರಲ್ಲಿ ವಿಭಾಗ ಆಗಿದ್ದು ಸದರಿ ವಿಭಾಗದ ನಕಲು ವಿಭಾಗ ಪ್ರತಿ ನನ್ನ ಬಳಿ ಇರುವುದಿಲ್ಲ.

33. ನಮ್ಮ ಮೂಲ ಕುಟುಂಬದಲ್ಲಿ 1941 ರಲ್ಲಿ ವಿಭಾಗದಲ್ಲಿ ವಿಭಾಗದ ಪತ್ರದ ಮೂಲ ಪ್ರತಿ ಹಾಗೂ ನಕಲು ಪ್ರತಿ ನನ್ನ ಬಳಿ ಇರುವುದರಿಂದ ಸದರಿ ವಿಭಾಗಕ್ಕೆ ಸಂಬಂದಿಸಿದಂತೆ ನನಗೆ ವಯಕ್ತಿಕ ಮಾಹಿತಿ ಇರುವುದಿಲ್ಲ.

34. 1941 ರಲ್ಲಿ ಆದ ವಿಭಾಗಕ್ಕೆ ಸಂಬಂದಿಸಿದಂತೆ ನಿ.ಪಿ-4 ರಂತೆ ಮ್ಯೂಟೇಷನ್ ದಾಖಲಾಗಿರುತ್ತದೆ. ಈ ದಾವೆ ಸಲ್ಲಿಸುವ ಕಾಲಕ್ಕೆ ನಿ.ಪಿ-4 ಕ್ಕೆ ಸಂಬಂದಿಸಿದಂತೆ ಮತ್ತು ಸದರಿ 1941 ರ ವಿಭಾಗಪತ್ರಕ್ಕೆ ಸಂಬಂದಿಸಿದಂತೆ ನಾನು ಕಂದಾಯ ಇಲಾಖೆಯಲ್ಲಿ ದಾಖಲೆಗಳನ್ನು ಹುಡುಕಲು ಪ್ರಯತ್ನಿಸಿರುವುದಿಲ್ಲ.



35. ನಿ.ಪಿ-4 ರಲ್ಲಿ ತೋರಿಸಿರುವ ಆಸ್ತಿಗಳು ನಮ್ಮ ಮೂಲ ಕುಟುಂಬದ ಆಸ್ತಿಗಳು ಆಗಿರುತ್ತವೆ. ನಿಪಿ-4 ರಲ್ಲಿ ತೋರಿಸಿರುವ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ನಮೂದುಮಾಡಿಲ್ಲ ಎಂದರೆ ಸರಿ.

36. ನಮ್ಮ ಮೂಲ ಕುಟುಂಬದಲ್ಲಿ 1941 ರಲ್ಲಿ ಆದ ವಿಭಾಗದ ಪ್ರಕಾರ ನಿ.ಪಿ–4 ಆಗಿರುತ್ತದೆ ಎಂದರೆ ಸರಿ. ನಿ.ಪಿ–4 ರಲ್ಲಿ ದಾವಾದ 2 ನೇ ಆಸ್ತಿ ಮಾಲ್ಕಿ ಆಸ್ತಿ ಎಂದು ನಮೂದಾಗಿರುತ್ತದೆ. ನಮ್ಮ ಮೂಲ ಕುಟುಂಬದಲ್ಲಿ 1941 ರಲ್ಲಿ ಆದ ವಿಭಾಗದಲ್ಲಿ ದಾವಾದ 2 ನೇ ಆಸ್ತಿ ಮಾಲ್ಕಿ ಆಸ್ತಿ ಎಂದು ನಮೂದಾಗಿರುತ್ತದೆ.

37. 1941 ರಿಂದ ಭೂ ಸುಧಾರಣೆ ಕಾಯಿದೆ ಜಾರಿಗೆ ಬರುವವರೆಗೆ ಮಾಲ್ಕಿ ಆಸ್ತಿಯನ್ನು ಗೇಣಿಗೆ ಕೊಡುವ ಪದ್ದತಿ ಇತ್ತು ಎಂದರೆ ಸರಿ. ಸದರಿ ಗೇಣಿ ಕೊಟ್ಟ ಆಸ್ತಿಗೆ ಸಂಬಂದಿಸಿದಂತೆ ಗೇಣಿಗೆ ಪಡೆದ ವ್ಯಕ್ತಿಯ ಹೆಸರನ್ನು ವ್ಯವಸಾಯಗಾರ ಕಾಲಂ ನಲ್ಲಿ ನಮೂದಿಸುತ್ತಿದ್ದರು ಎಂದರೆ ಸರಿ.

38. ದಾವಾದ 2 ನೇ ಆಸ್ತಿ 1941 ರಿಂದ 1973–74 ನೇ ಸಾಲಿನ ವರೆಿಗೆ ದಾವಾದ 2 ನೇ ಆಸ್ತಿ ಮಾಲ್ಕಿ ಆಸ್ತಿ ಆಗಿತ್ತು ಎಂದು ತೋರಿಸಲು ನಿ.ಪಿ–4 ನ್ನು ಹೊರತುಪಡಿಸಿ ಬೇರೇ ಯಾವುದೆ ದಾಖಲೆಗಳು ಇರುವುದಿಲ್ಲ.

39. ನಮ್ಮ ಮೂಲ ಕುಟುಬಂದಲ್ಲಿ 1941 ರಲ್ಲಿ ಆದ ವಿಭಾಗದ ಆಧಾರದ ಮೇಲೆ ನಿ,ಪಿ–4 ನ್ನು ದೃಡಿಕರಿಸಿರುತ್ತಾರೆ ಎಂದರೆ ಸರಿ.

40. ನಿ.ಪಿ–5 ರ ಕಾಲಂ ನಂ 12 ರಲ್ಲಿ 2 ನೇ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿ.

41. ನಿ.ಪಿ–5 ರ ಪ್ರಕಾರ 1964–1965 ರಿಂದ 1981–1982 ನೇ ಸಾಲಿನ ವರೆಗೆ ಕಾಲಂ ನಂ 12 ರ ವ್ಯವಸಾಯಗಾರ ಕಾಲಂ ನಲ್ಲಿ ನನ್ನ ತಂದೆಯ ಹೆಸರು ನಮೂದಾಗಿರುವುದಿಲ್ಲ.

42. ಭೂಸುಧಾರಣೆ ಕಾಯಿದೆ ಜಾರಿಗೆ ಬಂದ ನಂತರ ಗೇಣಿ ಆಸ್ತಿಗಳನ್ನೆಲ್ಲ ಸರ್ಕಾರ ಮುಟ್ಟುಗೊಲು ಹಾಕಿಕೊಂಡಿರುತ್ತದೆ ಎಂದರೆ ಸರಿ.

43. ದಾವಾದ 2 ನೇ ಆಸ್ತಿ ಸರ್ಕಾರ ಭೂಸುಧಾರಣೆ ಕಾಯಿದೆ ಅಡಿ ಮುಟ್ಟುಗೊಲು ಹಾಕಿಕೊಂಡ ಆಸ್ತಿಗಳ ಒಳಗೆ ಬಂದಿರುತ್ತದೆ ಎಂದರೆ ಸರಿ. ದಾವಾದ 2 ನೇ ಆಸ್ತಿ ಸರ್ಕಾರ ಭೂಸುಧಾರಣೆ ಕಾಯಿದೆ ಅಡಿ ಮುಟ್ಟುಗೊಲು ಹಾಕಿಕೊಂಡ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಈ ದಾವೆಯನ್ನು ಮುಂದುವರೆಸುವ ಸಲುವಾಗಿ ಸದರಿ ದಾಖಲೆಯನ್ನು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.



ಸಾಕ್ಷಿಯು ಮುಂದುವರೆದು 2 ನೇ ಪ್ರತಿವಾದಿಗೆ ದಾವಾದ 2 ನೇ ಆಸ್ತಿಯನ್ನು ಯಾವುದೇ ಕಾಲದಲ್ಲೂ ಗೇಣಿಗೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

44. ದಾವಾದ 2 ನೇ ಆಸ್ತಿಯನ್ನು ಭೂಸುಧರಣೆ ಕಾಯಿದೆ ಅಡಿ ವಶಪಡಿಸಿಕೊಂಡ ನಂತರ ಸದರಿ ವಶಪಡಿಸಿಕೊಂಡ ಬಗ್ಗೆ ನಾವು ಎಲ್ಲಿಯೂ ಪ್ರಶ್ನಿಸಿಲ್ಲ. ದಾವಾದ 2 ನೇ ಆಸ್ತಿ ಗೇಣಿ ಆಸ್ತಿ ಎಂದು ಗೊತ್ತಿದ್ದರಿಂದ ಆ ಬಗ್ಗೆ ನಾವು ಸರ್ಕಾರದ ವಿರುದ್ದ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ದಾವಾದ 2 ನೇ ಆಸ್ತಿಗೆ ಯಾವ ವರ್ಷದಲ್ಲಿ ಸರ್ಕಾರ

ವಶಪಡಿಸಿಕೊಂಡಿದೆ ಎಂದು ನನಗೆ ಗೊತ್ತಿಲ್ಲ. ದಾವಾದ 2 ನೇ ಆಸ್ತಿಗೆ ಸಂಬಂದಿಸಿದಂತೆ ಕರ್ನಾಟಕ ಸರ್ಕಾರ ಏನೇನು ಪ್ರಕ್ರಿಯೆಗಳನ್ನು ಮಾಡಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ.

45. ನಿ,ಪಿ-9 ರ ಪ್ರಕಾರ ಭೂಮಾಲೀಕರ ಕಾಲಂ ನಲ್ಲಿ ಬಾಳಗೊಡ ಸೀತಾರಾಮಚಂದ್ರ ದೇವಬಿಳಗಿ, ಶ್ರೀ ರಾಮಪ್ಪ ನಾರಾಣಪ್ಪ ಪೈ ಎಂದರೆ ವಾದಿಯ ತಂದೆ , ಲಕ್ಷ್ಮೀಕಾಂತ ರಾಮರಾವ ಪೈ, ಸದರಿಯವರು ನಮ್ಮ ಕುಟುಬಂದ ಸದಸ್ಯರು. 1 ನೇ ಪ್ರತಿವಾದಿ ಪುಂಡಲೀಕ ವಾಸುದೇವ ಪೈ, ಶ್ರೀನಿವಾಸ ಗೋವಿಂದ ಪೈ ರವರ ವಾರಸುದಾರರು ಈ ದಾವೆಯ 9 ನೇ ಪ್ರತಿವಾದಿ ಮತ್ತು ಪಾಂಡುರಂಗ ಗೋವಿಂದ ಪೈ ರವರ ವಾರಸುದಾರರು ಈ ದಾವೆಯ 3 ರಿಂದ 8 ನೇ ಪ್ರತಿವಾದಿಗಳು.

46. ನಿ.ಪಿ-9 ರಲ್ಲಿ ಮಾಲೀಕರ ಕಾಲಂ ನಲ್ಲಿ ನಮೂದಿಸಿದ ಎಲ್ಲ ಮಾಲೀಕರಿಗೆ ಸದರಿ ಆಸ್ತಿಗಳನ್ನು ಮಂಜೂರಿ ಮಾಡುವ ಪೂರ್ವದಲ್ಲಿ ನೋಟೀಸ ಜಾರಿ ಆಗಿರುತ್ತದೆ ಎಂದರೆ ಸರಿ.

47. ದಾವಾದ 2 ನೇ ಆಸ್ತಿಯನ್ನು 2 ನೇ ಪ್ರತಿವಾದಿ ಸ್ವಾಧೀನ ಅನುಭವದಲ್ಲಿ ಇದ್ದುದರಿಂದ ಮತ್ತು ನಿ.ಪಿ-9 ರ ಮಾಲೀಕರ ಸಮ್ಮತಿಯ ಮೆರೆಗೆ ದಾವಾದ 2 ನೇ ಆಸ್ತಿಯನ್ನು ಸಿದ್ದಾಪುರ ಭೂನ್ಯಾಯ ಮಂಡಳಿಯವರು 2 ನೇ ಪ್ರತಿವಾದಿಗೆ ಮಂಜೂರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

48. ದಾವಾದ 2 ನೇ ಆಸ್ತಿಯ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ವಾದಿ ಮೂಲಕ 2 ನೇ ಪ್ರತಿವಾದಿ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

49. ದಾವಾದ 2 ನೇ ಆಸ್ತಿಗೆ ಸಂಬಂದಿಸಿದಂತೆ ಭೂ ಸುಧಾರಣೆ ಕಾಯಿದೆ ಪ್ರಕಾರ ನಮಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

50. ನಿ.ಪಿ-9 ರ ಆಧಾರದ ಮೇಲೆ ನಿ.ಪಿ-10 ಮತ್ತು 11 ರಂತೆ ದಾವಾದ 2 ನೇ ಆಸ್ತಿ ಸರ್ವೆ ನಂ 347/1+2 ಗೆ ಸಂಬಂದಿಸಿದಂತೆ ಆದೇಶ ಆಗಿರುತ್ತದೆ ಎಂದರೆ ಸರಿ. ನಿ.ಪಿ-10 ರ ಪ್ರಕಾರ ನಿ.ಪಿ-9 ರಲ್ಲಿ ಹೇಳಿರುವ ಭೂ ಮಾಲೀಕರು ಸಹ ನಿ.ಪಿ-10 ರಲ್ಲಿ ಪಾಲ್ಗೊಂಡಿದ್ದರು ಎಂದರೆ ಸರಿ.



ಸದರಿ ನಿ.ಪಿ-10 ರ ಕಾಲಕ್ಕೆ ವಾದಿ ಸಿದ್ದಾಪುರದ ಭೂ ನ್ಯಾಯ ಮಂಡಳಿಯ ಮುಂದೆ ಹಾಜರಾಗಿರುವುದಿಲ್ಲ. ನಿ.ಪಿ-10 ಕ್ಕೆ ಸಂಬಂದಿಸಿದಂತೆ ವಾದಿ ಸಿದ್ದಾಪುರದ ಭೂ ನ್ಯಾಯ ಮಂಡಳಿಯಿಂದ ನೋಟೀಸ ಜಾರಿ ಆಗಿರುತ್ತದೆ ಎಂದರೆ ಸರಿ.

51. ನಿ.ಪಿ-9 ಮತ್ತು 10 ರ ಪ್ರಕಾರ ದಾವಾದ 2 ನೇ ಆಸ್ತಿ ಸರ್ವೆ ನಂ 347/1+2 ಎಂದು ನಮೂದಾಗಿರುತ್ತದೆ ಎಂದರೆ ಸರಿ.

52. ನಿ.ಪಿ-11 ರ ಆದೇಶದ ಮೇರೆಗೆ ನಿ.ಪಿ-3 ರಂತೆ 2 ನೇ ಪ್ರತಿವಾದಿ ಹೆಸರಿಗೆ ಹಕ್ಕು ಬದಲಾವಣೆ ಆಗಿರುತ್ತದೆ ಎಂದರೆ ಸರಿ.

53. ನಿ.ಪಿ–3 ರಲ್ಲಿ ನಮೂದಿಸಿರುವ ಆದೇಶ ಸಂಖ್ಯೆ ನಿ.ಪಿ–9 ರಿಂದ 11 ರಲ್ಲಿ ನಮೂದಿಸಿದ ನಂಬರ ಆಗಿರುತ್ತದೆ ಎಂದರೆ ಸರಿ.

54. ಬಿಳಗಿ ಗ್ರಾಮದ ಸರ್ವೆ ನಂ 347 /1+2 ಆಸ್ತಿ ಅಸ್ತಿತ್ವದಲ್ಲಿ ಇರುವ ಬಗ್ಗೆ ನನಗೆ ಗೊತ್ತಿಲ್ಲ.ಬಿಳಗಿ ಗ್ರಾಮದ ಸರ್ವೆ ನಂ 347 /1+2 ಆಸ್ತಿ ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ನಿ.ಪಿ–3 ರಲ್ಲಿ ಸದರಿ ಆಸ್ತಿಯನ್ನು ಬಿಳಗಿ ಗ್ರಾಮದ ಸರ್ವೆ ನಂ 347 /1+3 ಎಂದು 2 ನೇ ಪ್ರತಿವಾದಿ ಹೆಸರಿಗೆ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ.

55. ನಿ.ಪಿ–9 ರಿಂದ 11 ರಲ್ಲಿ ಬಿಳಗಿ ಗ್ರಾಮದ ಸರ್ವೆ ನಂ 347 /1+2 ಇದ್ದುದನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಹಕ್ಕು ಸಾಧನೆ ಮಾಡುತ್ತಿದ್ದೆನೆ ಎಂದರೆ ಸರಿಯಲ್ಲ.

56. ಬಿಳಗಿ ಗ್ರಾಮದ ಸರ್ವೆ ನಂ 347 ರ ಆಕಾರ ಬಂದ್ ನ್ನು ತೆಗೆಸಿರುತ್ತೇನೆ. ಸದರಿ ಆಕಾರ ಬಂದ್ ನಲ್ಲಿ ಬಿಳಗಿ ಗ್ರಾಮದ ಸರ್ವೆ ನಂ 347 /2 ಮತ್ತು ಬಿಳಗಿ ಗ್ರಾಮದ ಸರ್ವೆ ನಂ 347 /1+3 ಇರುವುದು ಕಂಡುಬಂದಿರುತ್ತದೆ.

57. ಬಿಳಗಿ ಗ್ರಾಮದ ಸರ್ವೆ ನಂ 347 /2 ರಲ್ಲಿ 1 ಗುಂಟೆ ಇರುವ ಬಗ್ಗೆ ನನಗೆ ಕಂಡುಬಂದಿರುತ್ತದೆ. ಬಿಳಗಿ ಗ್ರಾಮದ ಸರ್ವೆ ನಂ 347 /1+3 ರಲ್ಲಿ 2 ಎಕರೆ 5 ಗುಂಟೆ ಇದ್ದು ಅದರಲ್ಲಿ 3 ಗುಂಟೆ ಖರಾಬ್ ಇರುವ ಬಗ್ಗೆ ನನಗೆ ಕಂಡುಬಂದಿರುತ್ತದೆ. ಸದರಿ ಕ್ಷೇತ್ರವನ್ನು ಹೊರತುಪಡಿಸಿ ಸರ್ವೆ ನಂ 347 ರಲ್ಲಿ ಹೆಚ್ಚಿನ ಕ್ಷೇತ್ರ ಕಂಡುಬಂದಿರುವುದಿಲ್ಲ.

58. ನಿ.ಪಿ–9 ರಿಂದ 11 ದಾಖಲೆಗಳ ಆಧಾರ ಮೇಲೆ ಬಿಳಗಿ ಗ್ರಾಮದ ಸರ್ವೆ ನಂ 347 ರಲ್ಲಿ 2 ಎಕರೆ 2 ಗುಂಟೆ ಜಮೀನು 2 ನೇ ಪ್ರತಿವಾದಿಗೆ ಮಂಜೂರಾಗಿರುತ್ತದೆ.



59. 58. ನಿ.ಪಿ–9 ರಿಂದ 11 ದಾಖಲೆಗಳ ಆಧಾರ ಮೇಲೆ ಬಿಳಗಿ ಗ್ರಾಮದ ಸರ್ವೆ ನಂ 347 ರಲ್ಲಿ 2 ಎಕರೆ 2 ಗುಂಟೆ ಜಮೀನು 2 ನೇ ಪ್ರತಿವಾದಿಗೆ 1980 ರಲ್ಲಿ ಮಂಜೂರಾಗಿರುವ ಬಗ್ಗೆ ನನಗೆ ತಿಳಿದು ಬಂದಿರುತ್ತದೆ.

60. 2013 ರ ಒಳಗೆ ದಾವಾದ 2 ನೇ ಆಸ್ತಿ 2 ನೇ ಪ್ರತಿವಾದಿಗೆ ಮಂಜೂರಾದ ಬಗ್ಗೆ ವಾದಿ ಅಥವಾ ಇತರ ಪ್ರತಿವಾದಿಗಳು ಪ್ರಶ್ನಿಸಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

61. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾವಾದ 2 ನೇ ಆಸ್ತಿ 2 ನೇ ಪ್ರತಿವಾದಿಯ ಹೆಂಡತಿ ಸುಮಂಗಲಾ ರವರ ಹೆಸರಿನಲ್ಲಿ ಇತ್ತು. ಸದರಿ ಸುಮಂಗಲಾ ರವರನ್ನು ಈ ದಾವೆಯಲ್ಲಿ 10 ನೇ ಪ್ರತಿವಾದಿಯಾಗಿ

ಸೇರಿಸಿದ್ದು ಸದರಿ 10 ನೇ ಪ್ರತಿವಾದಿ ಈಗ ಮೃತಪಟ್ಟಿದ್ದು ಅವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಸಲಾಗಿದೆ.

62. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ನಿ.ಪಿ–13 ರಿಂದ 21 ರವರೆಗಿನ ಆಸ್ತಿಗಳು ನಮ್ಮ ನಮ್ಮ ಹೆಸರಿನಲ್ಲಿ ಇದ್ದವು ಎಂದರೆ ಸರಿ.

63. ದಾವಾದ 2 ನೇ ಆಸ್ತಿ ಹೊರತುಪಡಿಸಿ ನಮ್ಮ ಕುಟುಂಬದಲ್ಲಿ ಆದ 1941 ರಲ್ಲಿ ಆದ ವಿಭಾಗಕ್ಕೆ ಸಂಬಂಧಿಸಿದಂತೆ ನಮ್ಮ ಕುಟುಂಬದ ಯಾವುದೇ ಸದಸ್ಯರ ನಡುವೆ ಯಾವುದೇ ವ್ಯಾಜ್ಯ ಆಗಿರುವುದಿಲ್ಲ.

64. ದಾವಾದ 2 ನೇ ಆಸ್ತಿ 2 ನೇ ಪ್ರತಿವಾದಿಯಿಂದ 10 ನೇ ಪ್ರತಿವಾದಿಯ ಹೆಸರಿಗೆ ಹೇಗೆ ಬದಲಾವಣೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾದ 2 ನೇ ಆಸ್ತಿಯನ್ನು 2 ನೇ ಪ್ರತಿವಾದಿ 10 ನೇ ಪ್ರತಿವಾದಿಗೆ ವರ್ಗಾವಣೆ ಮಾಡಿದ್ದು ಆ ನಂತರ 10 ನೇ ಪ್ರತಿವಾದಿ ಗೇಣಿ ನಾತೆಯಿಂದ ಕೃಷಿ ಮಾಡಿಕೊಂಡು ವ್ಯೆವಾಟು ಮಾಡುತ್ತಿದ್ದರು ಎಂದರೆ ಸರಿಯಲ್ಲ.

65. 2 ನೇ ಪ್ರತಿವಾದಿ ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿದ್ದರು ಎಂದರೆ ಸರಿ. ನನ್ನ ತಂದೆ ವಾದಿ ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿದ್ದರು.

66. 2 ನೇ ಪ್ರತಿವಾದಿಗೆ ದಾವಾದ 2 ನೇ ಆಸ್ತಿಯನ್ನು ಯಾವತ್ತೂ ಗೇಣಿಗೆ ನೀಡಿರುವುದಿಲ್ಲ.

67. ದಾವಾದ 2 ನೇ ಆಸ್ತಿಗೆ 2 ನೇ ಪ್ರತಿವಾದಿ ನಿ.ಪಿ–9 ರಿಂದ 11 ಮತ್ತು 3 ರ ಪ್ರಕಾರ ಮಾಲೀಕನಾಗಿದ್ದು, ಆ ನಂತರ ಆದ ದಾವಾದ 2 ನೇ ಆಸ್ತಿಯನ್ನು 10 ನೇ ಪ್ರತಿವಾದಿಗೆ ವರ್ಗಾವಣೆ ಮಾಡಿದ್ದು, 10 ನೇ ಪ್ರತಿವಾದಿ ಮತ್ತು ಅವರ ವಾರಸುದಾರರು ದಾವಾದ 2 ನೇ ಆಸ್ತಿಗೆ ಸಂಬಂಧಿಸಿದಂತೆ ಹಕ್ಕು ಅಧಿಕಾರ ಹೊಂದಿರುತ್ತಾರೆ ಎಂದರೆ ಸರಿಯಲ್ಲ.



68. ದಾವಾದ 2 ನೇ ಆಸ್ತಿಗೆ 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾದ 2 ನೇ ಆಸ್ತಿಯಲ್ಲಿ ವಾದಿಗಳಿಗಾಗಲಿ ಹಾಗೂ 1, 3 ರಿಂದ 9 ನೇ ಪ್ರತಿವಾದಿಗಳಿಗಾಗಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

69. ಈ ದಾವೆ ಸಲ್ಲಿಸಲು ನನಗೆ ಯಾವುದೇ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

ಸಹಿ ಇದೆ
ಸಿವಿಲ್ ನ್ಯಾಯಾಧೀಶರು ಸಿದ್ದಾಪುರ